**ಮಂಗಳೂರು ವಿಶ್ವವಿದ್ಯಾನಿಲಯ**

**ದಿನಾಂಕ 03.08.2019 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2019ನೇ ಸಾಲಿನ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು :**

**ಅನುಪಸ್ಥಿತ ಸದಸ್ಯರು:**

## ಪ್ರಾರಂಭಿಕ

1. ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡು ಸಿಂಡಿಕೇಟ್ ಸಭೆಗೆ ಹಣಕಾಸು ಅಧಿಕಾರಿ ಹುದ್ದೆಯ ನೆಲೆಯಲ್ಲಿ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಡಾ. ಶ್ರೀಪತಿ ಕಲ್ಲೂರಾಯ, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಸಿಂಡಿಕೇಟ್ ಸಭೆಗೆ ಸ್ವಾಗತಿಸಲಾಯಿತು.

2. ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಹಣಕಾಸು ಅಧಿಕಾರಿ ಹುದ್ದೆಯ ನೆಲೆಯಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸುತ್ತಿದ್ದ ಡಾ. ದಯಾನಂದ ನಾಯ್ಕ್ ಇವರನ್ನು ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರದಿಂದ ಬಿಡುಗಡೆಗೊಳಿಸಲಾಗಿರುತ್ತದೆ. ಡಾ. ನಾಯ್ಕ್‌ರವರು ಸಿಂಡಿಕೇಟ್ ಸಭೆಗಳಲ್ಲಿ ಭಾಗವಹಿಸಿ, ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರನ್ನು ಸಿಂಡಿಕೇಟ್ ಸಭೆ ಹಾಗೂ ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದಿಸಲಾಯಿತು.

### I ನಡಾವಳಿಗಳ ದೃಢೀಕರಣ

ದಿನಾಂಕ 25.06.2019 ರಂದು ನಡೆದ 2019ನೇ ಸಾಲಿನ ಸಿಂಡಿಕೇಟಿನ ತೃತೀಯ ಸಾಮಾನ್ಯ ಸಭೆಯ ನಡಾವಳಿಯ ಕುರಿತು ಸದಸ್ಯರಿಂದ ಯಾವುದೇ ಆಕ್ಷೇಪಣೆಗಳು ಬಾರದೆ ಇರುವುದರಿಂದ ಸದರಿ ನಡಾವಳಿಗಳನ್ನು ದೃಢೀಕರಿಸಲಾಯಿತು.

### II ಅನುಸರಣಾ ವರದಿಯ ಅನುಮೋದನೆ

ದಿನಾಂಕ 16.05.2019 ರಂದು ನಡೆದ ಸಿಂಡಿಕೇಟಿನ 2019ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:-

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ.ಘಟಕ:ಸಾ.ಸ4:1(2019)

**ವಿಷಯ :** ಶ್ರೀ ಭರತ್, ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಹಾಗೂ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ:ಸಾ.ಸ4:2(2019)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟಿನಿಂದ ಅನುಮೋದನೆಗೊಂಡು ಪ್ರಸ್ತುತ ಜಾರಿಯಲ್ಲಿರುವ ವಕೀಲರ ಯಾದಿಯನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿದ್ದ ಪಟ್ಟಿಯಿಂದ ಕೆಲವು ವಕೀಲರ ಹೆಸರುಗಳನ್ನು ಕೈಬಿಡಲು ಹಾಗೂ ಹೊಸ ಯಾದಿಯಿಂದ ವಕೀಲರ ಹೆಸರುಗಳನ್ನು ಸೇರ್ಪಡೆಗೊಳಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ4:3(2019)

**ವಿಷಯ :** ವಿಶ್ವವಿದ್ಯಾನಿಲಯದ ವಿವಿಧ ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ನೀಡಲಾಗುವ ಕಾರು ಮೈಲೇಜು ಪಾವತಿ ಬಗ್ಗೆ.

**ನಿರ್ಣಯ:** ಗರಿಷ್ಠ 700 ಕಿಲೋಮೀಟರ್ ಮೀರದಂತೆ ಪ್ರಯಾಣದ ಪ್ರತಿ ಕಿಲೋಮೀಟರ್‌ಗೆ ರೂ.9.00ರ ದರದಲ್ಲಿ ಕಾರ್ ಮೈಲೇಜ್ ನೀಡಲು ಹಾಗೂ 700 ಕಿಲೋಮೀಟರ್‌ಗಿಂತ ಹೆಚ್ಚಿನ ದೂರದ ಪ್ರಯಾಣಕ್ಕೆ Boarding Pass ಹಾಜರುಪಡಿಸುವ ಷರತ್ತಿನಲ್ಲಿ Economy Class Airfare ಅಥವಾ ಟಿಕೆಟ್ ಹಾಜರುಪಡಿಸುವ ಷರತ್ತಿನಲ್ಲಿ Second AC Train fare ಪಾವತಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ4:4(2019)

**ವಿಷಯ :** ಎಪ್ರಿಲ್/ಮೇ 2019ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ನಿರ್ಣಯ:** ತನಿಖಾ ಸಮಿತಿಯ ವರದಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:5(2019)

**ವಿಷಯ :** ಡಾ. ಜೋಗನ್‌ಶಂಕರ್, ನಿವೃತ್ತ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಅವಧಿಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.4:6(2019)

**ವಿಷಯ :** ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.4:7(2019)

**ವಿಷಯ :** ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.4:8(2019)

**ವಿಷಯ :** ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.4:9(2019)

**ವಿಷಯ :** ಸ್ನಾತಕೋತ್ತರ ವಸ್ತುವಿಜ್ಞಾನ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.4:10(2019)

**ವಿಷಯ :** ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ ಕ್ಯಾಂಪಸ್, ಚಿಕ್ಕ ಆಳುವಾರ, ಕೊಡಗು ಇಲ್ಲಿನ ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗಕ್ಕೆ ಸಂಯೋಜಕರನ್ನು ನೇಮಿಸುವ ಕುರಿತು.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.4:11(2019)

**ವಿಷಯ :** ಎಪ್ರಿಲ್/ಮೇ/ಜೂನ್ 2019ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ನಿರ್ಣಯ:** ತನಿಖಾ ಸಮಿತಿಯ ವರದಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:12(2019)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರವನ್ನು ನಿರ್ವಹಿಸಲು ಆದೇಶಿಸಿರುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:13(2019)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರತಿನಿಯೋಜನೆಯ ಮೇರೆಗೆ ಕಾರ್ಯಕಾರಿ ಅಭಿಯಂತರರ ನೇಮಕದ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:14(2019)

**ವಿಷಯ :** VGST-CISEE ಅನುದಾನ – ಜೀವ ರಸಾಯನಶಾಸ್ತ್ರ, ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ, ಚಿಕ್ಕ ಆಳುವಾರ – ಉಪಕರಣಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:15(2019)

**ವಿಷಯ :** ಗಣಕಯಂತ್ರ ಕೇಂದ್ರ – Firewall ನ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:16(2019)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಟ್ಟಡಕ್ಕೆ ಪರವಾನಿಗೆ ಶುಲ್ಕ ನಿಗದಿಪಡಿಸಿದ ಬಗ್ಗೆ.

**ನಿರ್ಣಯ:** ದಿನಾಂಕ 01.02.2019 ರಿಂದ 31.01.2024ರ ವರೆಗೆ ಮಾಸಿಕ ಪರವಾನಿಗೆ ಶುಲ್ಕ ರೂ.30,000/– + ತೆರಿಗೆ ವಿಧಿಸಲು ಹಾಗೂ ಕರಾರು ಒಪ್ಪಂದದ ನೋಂದಣಿ ವೆಚ್ಚದ ಶೇ.50%ನ್ನು ವಿಶ್ವವಿದ್ಯಾನಿಲಯದಿಂದ ಭರಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:17(2019)

**ವಿಷಯ :** Institute of Radiation Emergency Medicine, Hirosaki University, Japan ಇವರೊಂದಿಗೆ ಸಂಶೋಧನಾ ಸಹಕಾರಕ್ಕೆ ಸಂಬಂಧಿಸಿ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:18(2019)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ''ಬ್ಯಾರಿ ಅಧ್ಯಯನ ಪೀಠ'' ಸ್ಥಾಪನೆ ಬಗ್ಗೆ ರಚಿಸಿದ ಕರಡು ಪರಿನಿಯಮವನ್ನು ಅನುಮೋದಿಸುವ ಕುರಿತು.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:19(2019)

**ವಿಷಯ :** ಪುತ್ತೂರಿನ ನೆಲ್ಯಾಡಿಯಲ್ಲಿ ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ರಚಿಸಿದ ಕರಡು ಅನುಶಾಸನದ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:20(2019)

**ವಿಷಯ :** ಬೋಧಕ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿ ಸರ್ಕಾರವು ಹೊರಡಿಸಿರುವ ಆದೇಶವನ್ನು ವಿಶ್ವವಿದ್ಯಾನಿಲಯದ ಬೋಧಕ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿ ಚಾಲ್ತಿಯಲ್ಲಿರುವ ಪರಿನಿಯಮದಲ್ಲಿನ ಅವಕಾಶದಂತೆ ಅಳವಡಿಸಿ ಅನುಷ್ಠಾನಗೊಳಿಸುವ ಬಗ್ಗೆ.

**ನಿರ್ಣಯ:** ಸರ್ಕಾರಿ ಆದೇಶ ಸಂಖ್ಯೆ: ಇಡಿ 136 ಯುಎನ್ಇ 2017, ಬೆಂಗಳೂರು ದಿನಾಂಕ 03.06.2019 ರಲ್ಲಿ ತಿಳಿಸಲಾದ ಮಾರ್ಗಸೂಚಿಗಳನ್ನು ಪರಿನಿಯಮದೊಂದಿಗೆ ಅಂತರ್ಗತ ಮಾಡಿಕೊಂಡು ಅನುಷ್ಠಾನಗೊಳಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:21(2019)

**ವಿಷಯ :** ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ಪ್ರಾಂಶುಪಾಲರ ಹುದ್ದೆಯ ಪ್ರಭಾರವನ್ನು ನೀಡುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.4:22(2019)

**ವಿಷಯ :** ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪಜಾಪಪಂ ಘಟಕ:ಸಾ.ಸ.4:23(2019)

**ವಿಷಯ :** ಶ್ರೀ ಯೋಗೇಶ ಕೆ.ಎಂ., ಸಂಶೋಧನಾ ವಿದ್ಯಾರ್ಥಿ, ಗಣಕ ವಿಜ್ಞಾನ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಹಾಗೂ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ಮುಂಗಡ ನೀಡಿರುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:24(2019)

**ವಿಷಯ :** 2019–20ನೇ ಸಾಲಿನ ತೃತೀಯ ವರ್ಷದ ಪದವಿ ತರಗತಿಗಳಿಗೆ 3 ಕನ್ನಡ ಐಚ್ಛಿಕ ಪಠ್ಯಪುಸ್ತಕಗಳನ್ನು ಮುದ್ರಿಸುವ ಬಗ್ಗೆ

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:25(2019)

**ವಿಷಯ :** Atomic Energy Regulatory Board, Mumbai ಇವರೊಂದಿಗೆ ಸಂಶೋಧನಾ ಸಹಕಾರಕ್ಕೆ ಸಂಬಂಧಿಸಿ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಸಂಶೋಧನಾ ಸಹಕಾರಕ್ಕೆ ಸಂಬಂಧಿಸಿ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:26(2019)

**ವಿಷಯ :** International Atomic Energy Agency, Vienna ಇವರೊಂದಿಗೆ ಸಂಶೋಧನಾ ಸಹಕಾರಕ್ಕೆ ಸಂಬಂಧಿಸಿ Research Agreement ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಸಂಶೋಧನಾ ಸಹಕಾರಕ್ಕೆ ಸಂಬಂಧಿಸಿ Research Agreement ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.4:27(2019)

**ವಿಷಯ :** ಸಂತ ಆಗ್ನೆಸ್ ಕಾಲೇಜು (ಸ್ವಾಯತ್ತ), ಮಂಗಳೂರು ಇಲ್ಲಿ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಎಂ.ಎಸ್ಸಿ. ಸೈಕಾಲಜಿ ಕೋರ್ಸಿಗೆ ಹೆಚ್ಚುವರಿ ವಿಭಾಗವನ್ನು ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಎಂ.ಎಸ್ಸಿ. ಸೈಕಾಲಜಿ ಕೋರ್ಸಿಗೆ ಪ್ರವೇಶ ಮಿತಿ 30 ಮೀರದಂತೆ ಹೆಚ್ಚುವರಿ ಒಂದು ವಿಭಾಗವನ್ನು ಶೈಕ್ಷಣಿಕ ವರ್ಷ 2019–20 ಸಾಲಿಗೆ ಮಾತ್ರ ಸೀಮಿತಗೊಳಿಸಿ ಮಂಜೂರು ಮಾಡಲು ನಿರ್ಣಯಿಸಲಾಯಿತು. ಎಂ.ಎಸ್ಸಿ. ಸೈಕಾಲಜಿ ಕೋರ್ಸ್‌ಗೆ ವಿದ್ಯಾರ್ಥಿಗಳಿಂದ ಬೇಡಿಕೆ ಇರುವುದರಿಂದಾಗಿ 2020–21ನೇ ಸಾಲಿನಿಂದ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಸದರಿ ಕೋರ್ಸ್ ಪ್ರಾರಂಭಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.4:28(2019)

**ವಿಷಯ :** ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಡಾ. ಜಿ. ಶಂಕರ್ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಅಜ್ಜರಕಾಡು, ಉಡುಪಿ ಎಂಬ ವಿದ್ಯಾ ಸಂಸ್ಥೆಗೆ ಬಿ.ಸಿ.ಎ. ಕೋರ್ಸಿಗೆ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.4:29(2019)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ನ್ಯೂಸ್‌ಲೆಟರ್ ಮುದ್ರಿಸುವ ಕುರಿತು.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾ.ಸ.4:30(2019)

**ವಿಷಯ :** ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಅಂತರ್ ವಿಶ್ವವಿದ್ಯಾನಿಲಯ ಕ್ರೀಡಾ ಚಟುವಟಿಕೆಗಳಿಗೆ ಟ್ರ್ಯಾಕ್ ಸೂಟ್ ಖರೀದಿಸುವ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:31(2019)

**ವಿಷಯ :** ಡಾ. ಬಿ. ಹೆಚ್. ಶೇಖರ್, ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ ದಿನಾಂಕ 19.08.2019 ರಿಂದ 24.08.2019ರವರೆಗೆ Moscow State University, Moscow, Russia, ಇಲ್ಲಿ ನಡೆಯಲಿರುವ bilateral meeting ನಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:32(2019)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆಡಳಿತದಲ್ಲಿ Campus Management System ನ್ನು ಅಳವಡಿಸುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತವನ್ನು e-governance ಗೆ ಒಳಪಡಿಸುವ ನಿಟ್ಟಿನಲ್ಲಿ University/Campus Management System ನ್ನು ಅಳವಡಿಸಲು ತಾಂತ್ರಿಕ ವಿವರಣೆಗಳನ್ನು ತಿಳಿದುಕೊಂಡು KEONICS ಸಂಸ್ಥೆಯ ಮೂಲಕ ಪ್ರಸ್ತಾವನೆ ಆಹ್ವಾನಿಸಿ ಮುಂದಿನ ಕ್ರಮ ತೆಗೆದುಕೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:33(2019)

**ವಿಷಯ :** ವಿಶ್ವವಿದ್ಯಾನಿಲಯದಲ್ಲಿ ಅಂಬೇಡ್ಕರ್ ಭವನ ನಿರ್ಮಾಣದ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.4:34(2019)

**ವಿಷಯ :** ವಿಶ್ವವಿದ್ಯಾನಿಲಯದಲ್ಲಿ ಸುಸಜ್ಜಿತ ಪರೀಕ್ಷಾ ಭವನ ನಿರ್ಮಾಣದ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:35(2019)

**ವಿಷಯ :** ಪ್ರೊ. ಎಂ. ಜಯಶಂಕರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರನ್ನು ನಿಯೋಜನೆ ಮೇರೆಗೆ ವರ್ಗಾಯಿಸುವ ಬಗ್ಗೆ.

**ನಿರ್ಣಯ:** ಪ್ರೊ. ಎಂ. ಜಯಶಂಕರ್, ಪ್ರಾಧ್ಯಾಪಕರು, ಇವರನ್ನು ಮಂಗಳಗಂಗೋತ್ರಿಯಲ್ಲಿರುವ ವಿಶ್ವವಿದ್ಯಾನಿಲಯ ಉದ್ಯೋಗ ಮಾಹಿತಿ ಹಾಗೂ ಮಾರ್ಗದರ್ಶನ ಕೇಂದ್ರ ಇದರ ಮುಖ್ಯಸ್ಥರನ್ನಾಗಿ ನಿಯೋಜನೆ ಮೇರೆಗೆ ವರ್ಗಾಯಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:36(2019)

**ವಿಷಯ :** 2017ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಗಂಗೋತ್ರಿಯ ಗಣಕ ವಿಜ್ಞಾನ ವಿಭಾಗದಿಂದ redeployment ಮೂಲಕ ವರ್ಗಾಯಿಸಿದ ಹುದ್ದೆಯನ್ನು ಹಿಂಪಡೆಯುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:37(2019)

**ವಿಷಯ :** ಡಾ. ಶಾಮಸುಂದರ್ ಜೆ., ಸಹಾಯಕ ಪ್ರಾಧ್ಯಾಪಕರು, ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಇವರ ಮೇಲಿನ ದೂರುಗಳ ಬಗ್ಗೆ ನಡೆಸಿದ ಇಲಾಖಾ ವಿಚಾರಣೆಯ ವರದಿ – ಶಿಸ್ತು ಕ್ರಮ ಕೈಗೊಳ್ಳುವ ಕುರಿತು.

**ನಿರ್ಣಯ:** ದಿನಾಂಕ 26.03.2018 ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ದಿನಾಂಕ 02.04.2018ರಲ್ಲಿ ನೀಡಲಾದ ಶೋಕಾಸ್ ನೋಟೀಸಿಗೆ ಡಾ. ಶಾಮಸುಂದರ್ ಜೆ. ರವರು ನೀಡಿರುವ ಸಮಜಾಯಿಷಿಕೆಯ ಕುರಿತು ಸಿಂಡಿಕೇಟ್ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿಯವರು ಅಮಾನತ್ತುಗೊಂಡು ಈಗಾಗಲೇ ಒಂದು ವರ್ಷ ಕಳೆದಿದ್ದು, ಸದರಿಯವರಿಗೆ ತಮ್ಮ ನಡತೆಯನ್ನು ತಿದ್ದಿಕೊಳ್ಳಲು ಈ ಕೆಳಗಿನ ಷರತ್ತಿಗಳಿಗೊಳಪಟ್ಟು ಒಂದು ಅವಕಾಶವನ್ನು ನೀಡಲು ನಿರ್ಣಯಿಸಲಾಯಿತು.

1. ಸದರಿಯವರ ಎರಡು ವಾರ್ಷಿಕ ವೇತನ ಬಡ್ತಿಯನ್ನು (Non-Compounded Increment) ಕಟಾಯಿಸುವುದು.
2. ಸದರಿಯವರಿಗೆ ತಿಳುವಳಿಕೆ ಪತ್ರವನ್ನು ನೀಡಿ "ನಡತೆ ತಿದ್ದಿಕೊಳ್ಳುವ ಬಗ್ಗೆ" ಮುಚ್ಚಳಿಕೆ ಪತ್ರವನ್ನು ಬರೆಸಿಕೊಳ್ಳುವುದು.
3. ಸದರಿಯವರಿಗೆ ವಿಶ್ವವಿದ್ಯಾನಿಲಯದ ಸಮಾಲೋಚಕರಿಂದ "Counseling" ನೀಡುವುದು.
4. ಸದರಿಯವರ ಕಾರ್ಯಸ್ಥಳವನ್ನು ಬದಲಾಯಿಸಿ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಗೆ ವರ್ಗಾಯಿಸಿ ಅಲ್ಲಿನ ಯೋಗ ತೆರಪಿ ಡಿಪ್ಲೊಮಾ ಕೋರ್ಸ್‌ನ ಸಂಯೋಜಕರನ್ನಾಗಿ ನೇಮಿಸುವುದು.
5. ಸದರಿಯವರು ವಿಶ್ವವಿದ್ಯಾನಿಲಯವು ನೀಡಿರುವ ಅವಕಾಶವನ್ನು ಉಪಯೋಗಿಸಿಕೊಂಡು ತಮ್ಮ ನಡತೆಯನ್ನು ತಿದ್ದಿಕೊಳ್ಳತಕ್ಕದ್ದು ಹಾಗೂ ಅವರ ಮೇಲೆ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರು ನಿಗಾ ಇಡುವುದು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.4:38(2019)

**ವಿಷಯ :** ಡಾ. ಎಂ. ಜಯಶಂಕರ್, ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರ ಮೇಲಿನ ದೂರುಗಳ ಬಗ್ಗೆ ನಡೆಸಿದ ಇಲಾಖಾ ವಿಚಾರಣೆಯ ವರದಿಯ ಮೇಲೆ ಸಮಜಾಯಿಷಿಕೆ ನೀಡಿದ ಬಗ್ಗೆ.

**ನಿರ್ಣಯ:** ದಿನಾಂಕ 23.05.2018ರ ಸಿಂಡಿಕೇಟು ಸಭೆಯ ನಿರ್ಣಯವನ್ನು ಮರುಪರಿಶೀಲಿಸಿ ಸದರಿಯವರಿಗೆ ತಮ್ಮ ನಡತೆಯನ್ನು ತಿದ್ದಿಕೊಳ್ಳಲು ಈ ಕೆಳಗಿನ ಷರತ್ತಿಗಳಿಗೊಳಪಟ್ಟು ಒಂದು ಅವಕಾಶವನ್ನು ನೀಡಲು ನಿರ್ಣಯಿಸಲಾಯಿತು.

1. ಸದರಿಯವರಿಗೆ ತಿಳುವಳಿಕೆ ಪತ್ರವನ್ನು ನೀಡಿ "ನಡತೆ ತಿದ್ದಿಕೊಳ್ಳುವ ಬಗ್ಗೆ" ಮುಚ್ಚಳಿಕೆ ಪತ್ರವನ್ನು ಬರೆಸಿಕೊಳ್ಳುವುದು.
2. ಸದರಿಯವರಿಗೆ ವಿಶ್ವವಿದ್ಯಾನಿಲಯದ ಸಮಾಲೋಚಕರಿಂದ "Counseling" ನೀಡುವುದು.
3. ಸದರಿಯವರ ಕಾರ್ಯಸ್ಥಳವನ್ನು ಬದಲಾಯಿಸಿ ಮಂಗಳಗಂಗೋತ್ರಿಗೆ ನಿಯೋಜಿಸುವುದು ಹಾಗೂ ಸದರಿಯವರ ನಡವಳಿಕೆಯ ಮೇಲೆ ಅಧಿಕಾರಿಗಳು ನಿಗಾ ಇಡುವುದು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| **ಕುಲಸಚಿವರು** | **ಕುಲಪತಿಗಳು** |